ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	911 (844)
ಸದಸ್ಯರ ಹೆಸರು	:	ಶ್ರೀ ಎಸ್.ನಾಗರಾಜ್ (ಸಂದೇಶ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	10.03.2021.
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು ಲೋಕೋಪಯೋಗಿ ಇಲಾಖೆ

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಮೈಸೂರು-ಚಾಮರಾಜನಗರ ಹೆದ್ದಾರಿಯಲ್ಲಿ ಬರುವ ಬೆಂಡರವಾಡಿ ಕೆರೆ ಏರಿಯ ಉದ್ದ ಎಷ್ಟು; ಕೆರೆ ಏರಿಯ ಮೇಲಿನ ಈ ರಸ್ತೆಯು ಗುಂಡಿಬಿದ್ದು ಹಾಳಾಗಿ ಸಂಚಾರಕ್ಕೆ ಅಡಚಣೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ರಸ್ತೆಯನ್ನು ದುರಸ್ತಿಗೊಳಿಸಲು ಕ್ರಮ ಜರುಗಿಸಲಾಗುವುದೇ:	ಮೈಸೂರು-ಚಾಮರಾಜನಗರ ಹೆದ್ದಾರಿಯಲ್ಲಿ ಬರುವ ಬೆಂಡರವಾಡಿ ಕೆರೆ ಏರಿಯ ಉದ್ದ 900.00 ಮೀಗಳು ಇರುತ್ತದೆ. ಕೆರೆ ಏರಿಯ ಮೇಲಿನ ರಸ್ತೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸದರಿ ರಸ್ತೆಯ ಅಗಲೀಕರಣಗೊಳಿಸುವ ಕಾಮಗಾರಿಯು ಅನುಮೋದನೆಗೊಂಡಿದ್ದು, ಕೆರೆ ಏರಿಯ ಮೇಲಿನ ಕಿ.ಮೀ.668.100 ರಿಂದ ಕಿ.ಮೀ.669.00 ವರೆಗೆ ರಸ್ತೆಯನ್ನು ಅಗಲೀಕರಣಗೊಳಿಸಲಾಗುವುದು. ಗುಂಡಿಗಳನ್ನು ತಾತ್ಕಾಲಿಕವಾಗಿ ಗ್ರ್ಯಾವೆಲ್ ಪ್ಯಾಚ್ ಮಾಡಿ ನಿರ್ವಹಿಸಲಾಗುತ್ತಿದೆ.
ಆ	ಕೆರೆ ಏರಿ ಕಿರಿದಾಗಿದ್ದು, ಅಪಾಯಕಾರಿ ಸ್ಥಿತಿಯಲ್ಲಿರುವುದರಿಂದ ಸದರಿ ಹೆದ್ದಾರಿಗೆ ಅನುಗುಣವಾಗಿ ಏರಿಯನ್ನು ಅಗಲೀಕರಣ ಮಾಡಲು ಅಥವಾ ಏರಿಯ ಹಿಂದೆ ಈಗಿರುವ ಕಚ್ಚಾ ರಸ್ತೆಯನ್ನು ಅಗಲೀಕರಣ ಮಾಡಿ ಅಭಿವೃದ್ಧಿಪಡಿಸಿ, ಕೆರೆ ಏರಿಯ ಮೇಲೆ ಮತ್ತು ಏರಿಯ ಹಿಂದೆ ಏಕಮುಖ ಸಂಚಾರ ವ್ಯವಸ್ಥೆ ತರಲು ಯೋಜನೆಯನ್ನು ಸಿದ್ದಪಡಿಸಿ ಜಾರಿಗೆ ತರಲು ಕ್ರಮ ಜರುಗಿಸಲಾಗುವುದೇ?	ಸದರಿ ಕೆರೆ ಏರಿ ಭಾಗದ ರಸ್ತೆಯನ್ನು ಅಗಲೀಕರಣಗೊಳಿಸಲು RE Panel ಅಳವಡಿಸಿ ತಡೆಗೋಡೆ ನಿರ್ಮಾಣದ ವಿನ್ಯಾಸ ಅನುಮೋದನೆಗೊಂಡಿದ್ದು, ಕೆರೆ ಏರಿ ಭಾಗದ ರಸ್ತೆ ಅಗಲೀಕರಣ ಗೊಳಿಸುವ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಕಡತ ಸಂಖ್ಯೆ: ಲೋಇ 81 ಸಿಎನ್‌ಹೆಚ್ 2021 (ಇ)

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯಮಂತ್ರಿ,
ಲೋಕೋಪಯೋಗಿ ಇಲಾಖೆ